ಕಳೆದುಕೊಂಡು, ಸಾಲ ತೆಗೆದುಕೊಂಡು ಕಟ್ಟಡ ಕಟ್ಟಿ ಪೂರ್ತಿಗೊಳಿಸಿರುವುದಕ್ಕೆ ಸಾಲಗಾರರು ಈಗ ಅವರಿಗೆ ಹಿಂಸೆ ಕೊಡುತ್ತಿದ್ದಾರೆ. ಆದುದರಿಂದ, ಅವರಿಗೆ ಯಾವಾಗ ಪೇಮೆಂಟ್ ಕೊಡುತ್ತೀರಿ? ಕಟ್ಟಡ ನಿರ್ಮಾಣ ಕೆಲಸ ಮುಗಿಸಿ ಒಂದು ವರ್ಷವಾಗಿದ್ದರೂ ಗುತ್ತಿಗೆದಾರರಿಗೆ ಪೇಮೆಂಟ್ ಕೊಡುವುದಿಲ್ಲವೆಂದರೆ ಅವರು ಹೇಗೆ ಬದುಕುತ್ತಾರೆ? 'ನಮಗೆ ಹಣಕ್ಕೇನೂ ಕೊರತೆಯಿಲ್ಲ, ಸರ್ಕಾರ ಹಣಕಾಸು ಸ್ಥಿತಿಯಲ್ಲಿ ಬಹಳಷ್ಟು ಉತ್ತಮವಾಗಿದೆ' ಎಂಬ ಮಾತನ್ನು ಹೇಳುತ್ತಿದ್ದೀರಿ. ಆದುದರಿಂದ, ದಯಮಾಡಿ ಅವರಿಗೆ ಯಾವಾಗ ಹಣ ಕೊಡುತ್ತೀರೆಂಬುದನ್ನು ಖಚಿತವಾಗಿ ತಿಳಿಸಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ.ಪಿ.ಪ್ರಕಾಶ್: ಸನ್ಮಾನ್ಯ ಅಧ್ಯಕ್ಷರೆ, ಸುಮಾರು 130 ಕೋಟಿ ರೂಪಾಯಿಗಳ ರಾಷ್ಟ್ರೀಯ ಕ್ರೀಡಾ ಯೋಜನೆಯನ್ನು ಬೆಂಗಳೂರಿನಲ್ಲಿ ಯಶಸ್ವಿಯಾಗಿ ನಾವು ನಡೆಸಿದ್ದೇವೆ. ಅನೇಕ ಸಂದರ್ಭಗಳಲ್ಲಿ ನಾವು ಸರ್ಕಾರದ ಆರ್ಥಿಕ ಪರಿಸ್ಥಿತಿ ಚೆನ್ನಾಗಿದೆಯೆಂದರೆ ಯಾವಾಗಲೂ ಕೂಡ ಪ್ರತಿಯೊಂದಕ್ಕೂ ಹಣವನ್ನು ಸಂಪೂರ್ಣವಾಗಿ ಕೊಡಬೇಕೆನ್ನುವಷ್ಟು ತೃಪ್ತಿಕರವಾಗಿ ಇರುವುದಿಲ್ಲ. ಒಂದು ಕಡೆ ಹಣ ಬರುತ್ತಿರುತ್ತದೆ, ಇನ್ನೊಂದು ಕಡೆ ಬೇರೆ ಬೇರೆ ಬಾಬ್ತುಗಳಿಗೆ ಹಂಚಿಕೆಯಾಗಬೇಕಾಗಿರುತ್ತದೆ. ಒಂದು ಕೌಟುಂಬಿಕ ವರ್ಗದಲ್ಲಿ ಯಾವ ರೀತಿಯಾದ ವ್ಯವಸ್ಥೆ ಇರುತ್ತದೆಯೋ ಸರ್ಕಾರದಲ್ಲಿಯೂ ಅದೇ ರೀತಿ ಇರುತ್ತದೆ. ಗುತ್ತಿಗೆದಾರರಿಗೆ ಕಳೆದ ಒಂದು ವರ್ಷದಿಂದ ಹಣ ಕೊಟ್ಟಿಲ್ಲವೆಂದು ತಾವು ಏನು ಹೇಳಿದ್ದೀರಿ, ಅದರ ಬಗ್ಗೆ ನನಗೂ ಕೂಡ ಸಹಾನುಭೂತಿ ಇದೆ. ಆದರೆ, ಮುಂದೆ ಹಣ ಕೊಡತಕ್ಕಂಥ ಸಂದರ್ಭದಲ್ಲಿ ಇವರೆಲ್ಲರ ಬಗ್ಗೆ ಯೋಚನೆ ಮಾಡಿ ಹಣ ಕೊಡಿಸತಕ್ಕಂಥ ವ್ಯವಸ್ಥೆ ಮಾಡುತ್ತೇವೆ.

(3) ಗುಬ್ಬಿ ಪಟ್ಟಣದಲ್ಲಿ ಕುಡಿಯುವ ನೀರಿನ ಕೊರತೆ.

ಶ್ರೀ ಜೆ.ಸಿ.ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) (ಜೆ.ಎಸ್.ಶಿವನಂಜಪ್ಪನವರ ಪರವಾಗಿ): ಮಾನ್ಯ ಅಧ್ಯಕ್ಷರೆ, ಗುಬ್ಬಿ ಪಟ್ಟಣ ಹಿಂದೆ ಪಂಚಾಯಿತಿಯಾಗಿದ್ದಾಗ ಅಲ್ಲಿ ಕುಡಿಯುವ ನೀರಿನ ಯೋಜನೆ ಪ್ರಾರಂಭವಾಗಿ, ಸುಮಾರು 18 ಲಕ್ಷ ರೂಪಾಯಿಗಳ ಒಂದು ಯೋಜನೆಯನ್ನು ಅನುಷ್ಠಾನಕ್ಕೆ ತಂದು, ಯೋಜನೆಯಲ್ಲಿ ಬೋರ್‌ವೆಲ್ ಅನ್ನು ಡ್ರಿಲ್ ಮಾಡುವುದು, ಮತ್ತು ನೀರನ್ನು ಸರಬರಾಜು ಮಾಡುವುದು ಸೇರಿತ್ತು. ಈಗ ಸದರಿ ಪಟ್ಟಣವನ್ನು ಏಕಸ್ಮಾತ್ ಮುನಿಸಿಪಾಲಿಟಿಯಾಗಿ ಪರಿವರ್ತನೆ ಮಾಡುತ್ತೇವೆಂದು ಹೇಳಿ ಯೋಜನೆಯನ್ನು ನಿಲ್ಲಿಸಿದ್ದಾರೆ. ಸದರಿ ಯೋಜನೆಯನ್ನು ಇವೊತ್ತು ಜಿಲ್ಲಾ ಪಂಚಾಯತ್‌ನವರು ಮಾಡಬೇಕೇ? ಮುನಿಸಿಪಾಲಿಟಿಯವರು ಮಾಡಬೇಕೇ? ಎಂಬ ವಿಷಯ ನೆನೆಗುದಿಗೆ ಬಿದ್ದಿದ್ದು ಸುಮಾರು 2-3 ವರ್ಷಗಳಿಂದ ಗುಬ್ಬಿ ಪಟ್ಟಣದ ನಾಗರಿಕರಿಗೆ ಕುಡಿಯುವುದಕ್ಕೆ ನೀರಿಲ್ಲದ ಧರಣಿ, ಮುಷ್ಕರ ನಡೆಸುವುದರ ಮೂಲಕ

ಹೋರಾಟ ಮಾಡುತ್ತಿದ್ದಾರೆ. ಏಕೆಂದರೆ, ಮೇಲೆ ತಿಳಿಸಿದ ಎರಡೂ ಇಲಾಖೆಗಳು ಸರ್ಕಾರದ ಅಧೀನದಲ್ಲಿ ಬರುತ್ತದೆಂದು ನಾನು ತಿಳಿದಿದ್ದೇನೆ. ಗ್ರಾಮ ಪಂಚಾಯಿತಿಯಾಗಲಿ ಅಥವಾ ಪೌರಾಡಳಿತ ಇಲಾಖೆಯಾಗಲಿ ಏನಾದರೂ ಮಾಡಿ ಗುಬ್ಬಿ ಪಟ್ಟಣಕ್ಕೆ ತಕ್ಷಣ ಕುಡಿಯುವ ನೀರು ಒದಗಿಸುವುದಕ್ಕೆ ಈಗಾಗಲೇ ಯಾವ ಯೋಜನೆ ಆರಂಭವಾಗಿದೆ, ಅದನ್ನು ಮುಂದುವರೆಸುತ್ತೀರಾ? ಎಷ್ಟು ದಿವಸಗಳಲ್ಲಿ ಅದನ್ನು ಪೂರ್ಣಗೊಳಿಸುತ್ತೀರಿ? ಅಲ್ಲಿ ಹೇಮಾವತಿ ನದಿ ಹರಿಯುತ್ತಿದ್ದರೂ ಅಲ್ಲಿರುವ ಜನರಿಗೆ ಕುಡಿಯಲು ನೀರಿಲ್ಲ. ನಮ್ಮ ಜಿಲ್ಲೆಯಲ್ಲೂ ಇದು ವ್ಯಾಪಕವಾದ ಸಮಸ್ಯೆಯಾಗಿದೆ. ಆದುದರಿಂದ, ಗುಬ್ಬಿ ಪಟ್ಟಣದಲ್ಲಿ ಈ ಹಿಂದೆ ಕುಡಿಯುವ ನೀರಿನ ಯಾವ ಯೋಜನೆಯನ್ನು ಕೈಗೊಳ್ಳಲಾಗಿತ್ತೋ ಅದನ್ನು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಮುಂದುವರೆಸಿ ಸದರಿ ಪಟ್ಟಣಕ್ಕೆ ಕುಡಿಯುವ ನೀರು ಕೊಡುವ ಬಗ್ಗೆ ಆಲೋಚನೆ ಮಾಡುತ್ತೀರಾ? ಎಂಬುದಕ್ಕೆ ತಮ್ಮಿಂದ ಉತ್ತರ ಕೇಳಬಯಸುತ್ತೇನೆ.

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು): ಮಾನ್ಯ ಅಧ್ಯಕ್ಷರೆ, ಮೊದಲು ಗುಬ್ಬಿ ಪಟ್ಟಣ ಪಂಚಾಯಿತಿಯಾಗಿ ಪರಿವರ್ತನೆಯಾಗುವುದಕ್ಕಿಂತ ಮುಂಚೆ ಗ್ರಾಮ ಪಂಚಾಯಿತಿಯಾಗಿತ್ತು. ಅದು ಗ್ರಾಮ ಪಂಚಾಯಿತಿಯಾಗಿದ್ದಂಥ ಸಂದರ್ಭದಲ್ಲಿ ಅಲ್ಲಿಗೆ ಸುಮಾರು 18 ಲಕ್ಷ ರೂಪಾಯಿಗಳ ಒಂದು ಯೋಜನೆಯನ್ನು ಮಂಜೂರು ಮಾಡಿದೆವು. ಅನಂತರ, ಅದು ಪಟ್ಟಣ ಪಂಚಾಯಿತಿಯಾಗಿ ಪರಿವರ್ತನೆಯಾದ ನಂತರ ನಮ್ಮ ಇಲಾಖೆಯ ಹೊರತಾಗಿ ಅದು ಪೌರಾಡಳಿತ ಇಲಾಖೆಗೆ ಹೋಗುತ್ತದೆ. ಅಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕಾಗಿರುವುದು ಸಹಜ. ಈ ಕುರಿತು ಮಾನ್ಯ ಪೌರಾಡಳಿತ ಸಚಿವರೊಂದಿಗೆ ಮಾತನಾಡಬೇಕೆಂದು ಮಾನ್ಯ ಸದಸ್ಯರಾದ ಶಿವನಂಜನಪ್ಪನವರಿಗೆ ಎರಡು ದಿವಸಗಳ ಹಿಂದೆ ನಾನು ತಿಳಿಸಿದ್ದೆ. ಅವರು ಬಂದ ತಕ್ಷಣ ಪೌರಾಡಳಿತ ಇಲಾಖೆಯಿಂದ ಹಣ ಮಂಜೂರು ಮಾಡಿಸಿ ಸದರಿ ಕಾಮಗಾರಿಯನ್ನು ಮುಂದುವರೆಸುವುದಕ್ಕೆ ಕ್ರಮ ಕೈಗೊಳ್ಳುತ್ತೇನೆ.

(4) ಸುಮಾರು 33 ಕೋಟಿ ರೂಪಾಯಿ ಬೆಲೆಯ ಹೆಲಿಕ್ಯಾಪ್ಟರ್‌ನ್ನು ಕೊಂಡುಕೊಳ್ಳುವ ಸರ್ಕಾರದ ತೀರ್ಮಾನ ಕುರಿತು.

+ ಶ್ರೀ ಟಿ.ಬಿ.ಜಯಚಂದ್ರ (ಕಳ್ಳಂಬೆಳ್ಳ): ಮಾನ್ಯ ಅಧ್ಯಕ್ಷರೆ, ಪತ್ರಿಕೆಗಳಲ್ಲಿ ಕೆಲವು ದಿವಸಗಳ ಹಿಂದೆ ಈಗಾಗಲೇ ಪ್ರಕಟವಾಗಿರತಕ್ಕದ್ದು. ಸುಮಾರು 22 ಕೋಟಿ ಬೆಲೆಯ ಹೊಸ ಹೆಲಿಕ್ಯಾಪ್ಟರ್‌ನ್ನು ಕೊಂಡುಕೊಳ್ಳುವ ಬಗ್ಗೆ ಸರ್ಕಾರದಲ್ಲಿ ತೀರ್ಮಾನವಾಗಿ ಈಗಾಗಲೇ ಮೆಮೊರ್ಯಾಂಡಂ ಆಫ್ ಅಗ್ರಿಮೆಂಟ್‌ಗೆ ಸಹ ಸಹಿಯಾಗಿರುವ ಬಗ್ಗೆ ವರದಿಯಾಗಿದೆ. ನಮ್ಮಲ್ಲಿ ಈಗಾಗಲೇ ಒಂದು ಹೆಲಿಕ್ಯಾಪ್ಟರ್ ಇದೆ. ಅದು